ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 24 (265)
2. ಸದಸ್ಯರ ಹೆಸರು : ಶ್ರೀ ವಿಜಯ್ ಸಿಂಗ್
   (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 14.09.2021
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th><th>Reply</th></tr>
<tr><td>(ಅ)</td><td>ಬೀದರ್ ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಎಷ್ಟು ಎಕರೆ ಪ್ರದೇಶವನ್ನು ವಶಪಡಿಸಿಕೊಳ್ಳಲಾಗಿದೆ; ವಶಪಡಿಸಿಕೊಳ್ಳಲಾದ ರೈತರಿಗೆ ಸರ್ಕಾರದಿಂದ ಪರಿಹಾರ ನೀಡಲಾಗಿದೆಯೇ; ಪರಿಹಾರದ ಹಣವನ್ನು ಯಾವ ಆಧಾರದ ಮೇಲೆ ನಿಗಧಿಪಡಿಸಲಾಗಿದೆ;</td><td>ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು 2920-02 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಕೈಗಾರಿಕಾ ಪ್ರದೇಶಕ್ಕಾಗಿ | 1751-17 ಎಕರೆ
ಏಕಘಟಕ ಸಂಕೀರ್ಣಕ್ಕಾಗಿ | 1168-25 ಎಕರೆ
ಒಟ್ಟು | 2920-02 ಎಕರೆ

2920-02 ಎಕರೆ ಜಮೀನಿನ ಪೈಕಿ 2865-21 ಎಕರೆ ಜಮೀನಿಗೆ ಭೂಪರಿಹಾರ ಪಾವತಿಸಲಾಗಿದೆ.

ಬೀದರ್ ಜಿಲ್ಲೆ, ಬಸವಕಲ್ಯಾಣ ತಾಲ್ಲೂಕು, ತ್ರಿಪೂರಾಂತ ಗ್ರಾಮದಲ್ಲಿ ಆಟೋ ಪಾರ್ಕ್ ಸ್ಥಾಪನೆಗಾಗಿ</td><td>Karnataka Industrial Areas Development Board has acquired a total extent of 2920-02 acres in Bidar District.

For Industrial areas | 1751-17 acres
For Single Unit Complexes | 1168-25 acres
Total | 2920-02 acres

Compensation has been paid for 2865-21 acres out of 2920-02 acres.

Final Notification was issued on 31.03.2017 for an extent of 54-21 acres in Tripuranta village, Basavanakalyana</td></tr>
</table>

		54-21 ಎಕರೆ ಜಮೀನಿಗೆ ದಿನಾಂಕ: 31.03.2017 ರಂದು ಅಂತಿಮ ಅಧಿಸೂಚನೆ ಹೊರಡಿಸಿದ್ದು, ಸದರಿ ಜಮೀನಿಗೆ ಭೂಪರಿಹಾರ ನಿಗಧಿಪಡಿಸಲು ಬಾಕಿ ಇದ್ದು, ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 31.10.2018 ರಂದು ನಡೆದ ಭೂದರ ನಿರ್ಧರಣಾ ಸಲಹಾ ಸಮಿತಿ ಸಭೆಯಲ್ಲಿ ಭೂಪರಿಹಾರದ ಬಗ್ಗೆ ಭೂಮಾಲೀಕರು ಒಮ್ಮತಕ್ಕೆ ಬಾರದಿರುವ ಕಾರಣ ಭೂಪರಿಹಾರ ದರ ನಿಗದಿಪಡಿಸಲು ಸಾಧ್ಯವಾಗಿರುವುದಿಲ್ಲ. ಆದ್ಯತೆಯ ಮೇರೆಗೆ ಭೂಪರಿಹಾರ ನಿಗಧಿಪಡಿಸಿ ಪರಿಹಾರ ಪಾವತಿಸಲು ಕ್ರಮವಹಿಸಲಾಗುವುದು. ಕೆ.ಐ.ಎ.ಡಿ.ಬಿ. ವತಿಯಿಂದ ಅಂತಿಮ ಅಧಿಸೂಚನೆ ಹೊರಡಿಸಿ ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ದರ ನಿಗದಿಪಡಿಸುವ ಸಲುವಾಗಿ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿ / ಕೆ.ಐ.ಎ.ಡಿ.ಬಿ.ಯ ವಿಶೇಷ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಭೂದರ ನಿರ್ಧರಣಾ ಸಲಹಾ ಸಮಿತಿ ಸಭೆಯಲ್ಲಿ ಭೂಮಾಲೀಕರೊಂದಿಗೆ ಸಮಾಲೋಚಿಸಿ ಪ್ರಸ್ತಾವಿತ ಪ್ರದೇಶದಲ್ಲಿನ ಮಾರ್ಗಸೂಚಿ ದರ ಮತ್ತು ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಹಿಂದಿನ 3 ವರ್ಷಗಳ ಮಾರಾಟದ ಅಂಕಿ-ಅಂಶಗಳನ್ನು ಪರಿಗಣಿಸಿ	Taluk, Bidar District for establishment of an Auto Park. Price fixation is yet to be done for the said lands. Price was not fixed in the Price Fixation Advisory Committee meeting held on 31.10.2018, under the chairmanship of Deputy Commissioner, Bidar District, since the land owners were not in unanimity. Fixing of price and disbursing of compensation will be taken up on priority. After issue of final notification, Price Advisory Committee constituted under the Chairmanship of Deputy Commissioner / Special D.C., KIADB will fix the compensation by considering guidance value and sales statistics for the previous 3 years from the date of issue of preliminary notification and in consultation with land owners. Based on the recommendation, action is being taken

		ಶಿಫಾರಸ್ಸು ಮಾಡುವ ದರಕ್ಕೆ ಕೆ.ಐ.ಎ.ಡಿ. ಮಂಡಳಿ ಸಭೆಯ ಅನುಮೋದನೆ ಪಡೆದು ನಿಯಮಾನುಸಾರ ಪರಿಹಾರ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.	to pay compensation in accordance with the approval of the KIAD Board meeting.
(ಆ)	ಕೈಗಾರಿಕೆಗಳ ಸ್ಥಾಪನೆಯಾದರೆ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು;	ಕೈಗಾರಿಕಾ ನೀತಿ 2014-19 ಹಾಗೂ 2020-25ರನ್ವಯ ಸರ್ಕಾರದಿಂದ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆಯುವ ಕೈಗಾರಿಕಾ ಘಟಕಗಳು "ಡಿ" ವರ್ಗದ ಉದ್ಯೋಗಗಳಲ್ಲಿ ಶೇಕಡ 100 ರಷ್ಟು ಹಾಗೂ ಘಟಕದ ಒಟ್ಟಾರೆ ಉದ್ಯೋಗಗಳಲ್ಲಿ ಶೇಕಡ 70 ರಷ್ಟು ಉದ್ಯೋಗಗಳನ್ನು ಕನ್ನಡಿಗರಿಗೆ / ಸ್ಥಳೀಯರಿಗೆ ನೀಡುವ ನಿಬಂಧನೆಯಿದ್ದು, ಅದರಂತೆ ಉದ್ಯೋಗಗಳನ್ನು ನೀಡಿದ ಘಟಕಗಳಿಗೆ ಮಾತ್ರ ಅರ್ಹ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಮಂಜೂರು ಮಾಡಲಾಗುತ್ತಿದೆ.	As per the Industrial Policy 2014-19 and 2020-25, Industrial units availing incentives and concessions from the Government are required to provide minimum employment of 70% to Kannadigas on an overall basis and 100% in case of Group-'D' employees. Accordingly, incentives and concessions are provided to industries who have given employment as per the Industrial Policy.
(ಇ)	ಬೀದರ್ ಜಿಲ್ಲೆ ಸಮೀಪ ತೆಲಂಗಾಣ ರಾಜ್ಯಕ್ಕೆ ಹೊಂದಿಕೊಂಡಿರುವ ಜಹಿರಾಬಾದ್ ಪ್ರದೇಶದಲ್ಲಿ	ತೆಲಂಗಾಣ ರಾಜ್ಯದ ಜಹಿರಾಬಾದ್ ಪ್ರದೇಶವು ಬೀದರ್ ಗಡಿಭಾಗದಿಂದ ಸುಮಾರು 25 ಕಿಮೀ ದೂರದಲ್ಲಿದ್ದು, ಈ ಪ್ರದೇಶದಲ್ಲಿ ಕೈಗಾರಿಕಾ ಪ್ರದೇಶ ಸ್ಥಾಪನೆಯಾಗುತ್ತಿರುವುದು ಗಮನಕ್ಕೆ ಬಂದಿರುತ್ತದೆ.	Zahirabad area of Telangana State is around 25 kms from the border of Bidar and it has been learnt that an industrial area is being established in this area.

	ಕೈಗಾರಿಕೆ ಸ್ಥಾಪನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕೈಗಾರಿಕೆಗಳು ಸ್ಥಾಪನೆಯಾದರೆ ಕೈಗಾರಿಕೆಗಳಿಂದ ಬರುವ ತ್ಯಾಜ್ಯ ವಸ್ತುಗಳ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗುವುದೇ; ಹಾಗಿದ್ದಲ್ಲಿ, ಯಾವ ಸ್ಥಳದಲ್ಲಿ ಸ್ಥಾಪನೆ ಮಾಡಲಾಗುವುದು?	ಮುಂದುವರೆದು ಜಹಿರಾಬಾದ್ ಪ್ರದೇಶವು ಪೂರ್ವಕ್ಕೆ ಇಳಿಜಾರಾಗಿದ್ದು, ಬೀದರ್‌ಗಿಂತ ಕೆಳಮಟ್ಟದಲ್ಲಿ ಇರುವುದರಿಂದ ಅಲ್ಲಿನ ಕೈಗಾರಿಕೆಗಳ ತ್ಯಾಜ್ಯವು ಬೀದರ್ ಜಿಲ್ಲೆಗೆ ಹರಿದು ಬರುವುದಿಲ್ಲವೆಂಬ ಬಗ್ಗೆ ಮಾಹಿತಿ ಪಡೆಯಲಾಗಿದೆ.	Information has been obtained that the Zahirabad is sloping towards east and lower level than Bidar, hence the industrial waste will not flow to Bidar district.

ಸಂಖ್ಯೆ: ಸಿಐ 154 ಐಎಪಿ (ಇ) 2021

(ಮುರುಗೇಶ್ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು